ದಶರತ್ನವೋ, ಹರಳೆಣ್ಣೆಯೋ ಏನೋ ಒಂದನ್ನು ನೆತ್ತಿಯ ಮೇಲೆ ಸುರಿದುಕೊಂಡು ಒಂದು ರೀತಿಯ ಆಧ್ಯಾತ್ಮಿಕ ಪ್ರಭಾವಳಿಯನ್ನು ಅವರ ಸುತ್ತಾ ಹೊಮ್ಮಿಸುತ್ತಿರುತ್ತಾರೆ.

ಇನ್ನು ಸಮಯವನ್ನು ಹೇಗೆ ಕೊಲ್ಲಬಹುದೆಂಬುದನ್ನು ಕಲಿಸಿಕೊಡುವುದೂ ಇದೇ ಮೇಲ್ವಿಚಾರಣೆಯ ಉದ್ಯೋಗವೇ! ಉತ್ತರ ಗೊತ್ತಿದ್ದವರು ಸರಸರ ತಮ್ಮ ಸರಕನ್ನು ಕಾಗದದ ಮೇಲೆ ಕಾರಿಕೊಳ್ಳುತ್ತಿದ್ದರೆ, ಕಡಿಮೆ ತುಂಬಿಸಿಟ್ಟ ಮೆದುಳಿನ ಸರಕು ಮುಗಿದವರು ಮೂರು ತಾಸು ಹೇಗಪ್ಪಾ ಕಳೆಯುವುದೆಂದು ತೋರದೇ ಎಲ್ಲೆಲ್ಲಿಯೋ ನೋಟವನ್ನು ನೆಟ್ಟಿರುತ್ತಾರೆ. ಸಾಮಾನ್ಯ ದಿನಗಳ ಪಾಠದ ಅವಧಿಯಲ್ಲಿ ವಿದ್ಯಾರ್ಥಿಗಳ ನೋಟವನ್ನು ನಾವು ನಿಯಂತ್ರಿಸಬಹುದು. ಅವರು ಪರೀಕ್ಷೆಯ ವೇಳೆ ಸರ್ವತಂತ್ರ ಸ್ವತಂತ್ರರು! ಆಕಳಿಸಿದರೂ ಸಹಿಸಿಕೊಳ್ಳಬೇಕು, ತೂಕಡಿಸಿದರೂ ಸುಮ್ಮನಿರಬೇಕು. ಸಹನೆಯನ್ನು ಕಲಿಸುವುದೂ ಇದೇ ಪರೀಕ್ಷೆ. ಇನ್ನು ಕೆಲವರು 'ಕಾಳಿಯ ಹಂಗಿಲ್ಲ, ಬೋಳಿಯ ಕಾಟವಿಲ್ಲ'ವೆಂಬಂತೆ ಪಟ್ಟಾಗಿ ನಿದ್ರಾದೇವಿಯ ಗಾಢ ಆಲಿಂಗನದಲ್ಲಿರುತ್ತಾರೆ. ಅವರನ್ನು ಎಚ್ಚರಿಸುವುದು ಗಂಟೆಗೊಮ್ಮೆ ಆಗುವ ಬೆಲ್ಲುಗಳು ಮಾತ್ರ. ಇನ್ನು ಕೆಲವರು ಬರೆಯುತ್ತಲೋ, ಚಿಂತಿಸುತ್ತಲೋ, ಬೇರೆಯವರು ತಮ್ಮ ಬಳಿಯೇ ಇಲ್ಲವೆಂಬಂತೆ ಮೂಗಿನ ಹೊಳ್ಳೆಗಳಿಂದ ಅವಿಶ್ರಾಂತವಾಗಿ ಲೋಳೆಯನ್ನು ತೆಗೆದು ಅದರಲ್ಲಿರಬಹುದಾದ ಅಮೂಲ್ಯ ನಿಧಿಯ ಹುಡುಕಾಟದಲ್ಲಿರುತ್ತಾರೆ. ಇನ್ನು ಕೆಲವರು ನಿಧಿ ಶೋಧನೆಯನ್ನು ಎರಡೆರಡು ಕಿವಿಗಳ ಆಳ ಬಾವಿಗಳಲ್ಲಿ ಮಾಡುತ್ತಿರುತ್ತಾರೆ. ನನ್ನ ಮಡದಿಯೊಮ್ಮೆ ಮೇಲ್ವಿಚಾರಕಿಯಾಗಿದ್ದಾಗ ನಿದ್ರೆಯ ಮಂಪರಿನಲ್ಲಿದ್ದ ವಿದ್ಯಾರ್ಥಿಯೊಬ್ಬ ಅಲಾರ್ಮ್ ಇಡುವಂತೆ ಇವಳ ಬಳಿ 'ಮ್ಯಾಡಮ್, ಜೋsssರು ತಲೆನೋವು, ಒಂದರ್ಧ ಗಂಟೆ ಮಲಗ್ತೀನಿ. ಆಮೇಲೆ ಎಬ್ಬಿಸಿ ಬಿಡಿ, ಪ್ಲೀಸ್' ಎಂದು ಮಲಗಿದ. ಅವ ಹೇಳಿದಂತೆ ಅರ್ಧಗಂಟೆಯಾದ ಕೂಡಲೇ ಈಕೆ ಹೋಗಿ ಎಬ್ಬಿಸಿದರೆ ಅಲಾರ್ಮನ್ನು ತೂಕಡಿಸುವ ಸ್ನೂಝ್ ಮೋಡಿನಲ್ಲಿ ಇಡುವಂತೆ 'ಇನ್ನು ಹತ್ತು ನಿಮಿಷ ಮಲಗ್ತೀನಿ ಮ್ಯಾಡಮ್' ಎಂದು ಹೊರಳಿ ಮಲಗಿದವ ಎದ್ದಿದ್ದು ಕಡೆಯ ಹತ್ತು ನಿಮಿಷದ ಅವಧಿಯ ಬೆಲ್ಲಾದ ಮೇಲೆ. ಕರುಣೆಯಿಂದ ನನ್ನಾಕೆ ಆತನ ಬಳಿ ಹೋಗಿ 'ಏನಪ್ಪಾ ರಾಜಾ? ಇನ್ನೇನಪ್ಪಾ ಮಾಡ್ತೀಯಾ?' ಎಂದು ವಿಚಾರಿಸಿದರೆ ಆತ ಮಾತ್ರ ಏನೂ ಆಗದವನಂತೆ ಹಿಹ್ಹಿಹ್ಹೀ ಎಂದು, 'ಪಾಸಾಗುವಷ್ಟು ಬರ್ದಿದಿನಿ ಬಿಡಿ ಮ್ಯಾಡಮ್, ಸಾಕಿಷ್ಟು' ಎನ್ನಬೇಕೆ? ಅಯ್ಯೋ ಅಂದರೆ ಅರ್ಧ ಆಯುಷ್ಯ ಕಮ್ಮಿಯೆಂಬಂತಾಗಿತ್ತು ಮಡದಿಗೆ.

ವಿದ್ಯಾರ್ಥಿಗಳ ಚರ್ಯೆಗಳೂ ಪರೀಕ್ಷೆಯ ಅವಧಿಯಲ್ಲಿ ಭಿನ್ನ ಭಿನ್ನವಾಗಿರುತ್ತವೆ. ಕೆಲವರಿಗೆ ಎಷ್ಟು ಕುಡಿದರೂ ತೀರದ ದಾಹ. ಜವಾನರು ನೀರನ್ನು ಕೊಟ್ಟೂ, ಕೊಟ್ಟೂ ಸಾಕಾಗುವಷ್ಟು ತಮ್ಮ ಉದರಗಳಲ್ಲಿ ತುಂಬಿಸಿಕೊಳ್ಳುತ್ತಾರೆ. ಬೇಸಿಗೆಯ ಕಾಲದಲ್ಲಿಯಂತೂ ಕೊಳವೆ ಬಾವಿಗೆ ಜಲ ಪೂರಣಮಾಡುವಂತೆ ಅವರ ಬಾಯಿಗೆ ನೀರು ಹೊಯ್ದಷ್ಟೂ ಸಾಕಾಗುವುದಿಲ್ಲ. ಕೆಲವರು ತಮ್ಮದೇ ಪೂರಣ ವ್ಯವಸ್ಥೆಯೊಂದಿಗೆ ಬಂದಿರುತ್ತಾರೆ. ಇನ್ನು ಅವರ ಕೈಗಳಲ್ಲಿನ ಬಗೆಬಗೆಯ ವಾಚುಗಳೋ? ಪೇರಿಸಿಟ್ಟ ಪೆನ್ನುಗಳೋ? ಕಾಗದವನ್ನು ಇನ್ನಷ್ಟು ಬಿಳಿಯಾಗಿ ಸಾರಿಸಲು ಸಜ್ಜಾದ ವೈಟನರ್‌ಗಳೋ? ಪೆನ್ಸಿಲನ್ನು ಇನ್ನಷ್ಟು ಚೂಪಾಗಿಸುವ ಉಳಿಗಳೋ? ಇವೆಲ್ಲ ಅವರವರ ಡೆಸ್ಕಿನ ಮೇಲೆ ಸಾಲಾಗಿ ಆಸೀನವಾಗಿರುತ್ತವೆ. ಲೋಕದಲ್ಲಿ ಇದ್ದಿರಬಹುದಾದ ಎಲ್ಲಾ ನಮೂನೆಯ ವಾಚುಗಳನ್ನು ನಾನು ಕಣ್ಣಾರೆ ನೋಡಿದ್ದು ಇದೇ ಮೇಲ್ವಿಚಾರಣೆಯ ವೇಳೆ! ಬಟಾಣಿಯ ಗಾತ್ರದ ವಾಚಿನಿಂದ ಹಿಡಿದು ಗಣಪೆ ಕಾಯಿಗಿಂತಲೂ ಅಗಲವಾದ ಡಯಲ್‌ಗಳುಳ್ಳ ವಾಚ್‌ಗಳನ್ನು ದರ್ಶನವೀಯುವ ಸ್ಥಳ ಇದೇ ಹಾಲು. ಅದೇ ರೀತಿ, ತರಹೇವಾರಿ ಫ್ಯಾನ್ಸೀ ವಾಚುಗಳೂ ದರ್ಶನ ಕೊಡುವುದು ಕೋಮಲೆಯರ ಕರಗಳಿಂದ ಮುಕ್ತರಾಗಿ ಡೆಸ್ಕಿನ ಮೇಲೆ ಮುದುರಿಕೊಂಡು ಮಲಗಿದ್ದಾಗಲೇ! ಬೇರೆ ಸಂದರ್ಭದಲ್ಲಿ